ಮತ್ತು ಜಡ ಪದಾರ್ಥಗಳ ಸಮಭಾಗಿತ್ವ ತಾರ್ಕಿಕವಾಗಿ ದುಸ್ಸಾಧ್ಯ. ಹೀಗಾಗಿ, ಅವರು ಜಗತ್ತಿನ ಬಗ್ಗೆ ಕೊಡುವ ವಿವರಣೆ ಅದು ಬರೀ ತೋರಿಕೆಯೆಂದು. ಮಂದ ಬೆಳಕಿನಲ್ಲಿ ಹಗ್ಗ ಹಗ್ಗವಾಗಿಯೇ ಇದ್ದುಕೊಂಡು, ಹಾವಾಗಿ ತೋರುವುದಿಲ್ಲವೇ! ಹಾಗೆಯೇ ಚೈತನ್ಯವು ತನ್ನ ಸ್ವರೂಪವನ್ನು ಬಿಟ್ಟುಕೊಡದೆ, ಜಗತ್ತಾಗಿ ತೋರುತ್ತದೆ. ಇನ್ನೊಂದು ವಿಚಾರವೆಂದರೆ, ಜಗತ್ತಿನ ವಿಷಯದಲ್ಲಷ್ಟೆ, ಜಡ ವಸ್ತುವಿಗೆ ಅಸ್ತಿತ್ವ. ಜಗತ್ತೇ ತೋರಿಕೆಯೆಂದಾದ ಮೇಲೆ, ಜಡ ವಸ್ತುವಿಗೆ ಸತ್ಯತೆಯೇ ಇಲ್ಲ. ಚೈತನ್ಯವೇ ಜಡರೂಪದಲ್ಲಿ ಕಾಣಿಸಿಕೊಳ್ಳುತ್ತದೆ, ಅಷ್ಟೆ. ಹೀಗಾಗಿ ಸೃಷ್ಟಿಯೆಂಬುದು ತಪ್ಪು ಗ್ರಹಿಕೆಯ ಪರಿಣಾಮ. ಪಾರಮಾರ್ಥಿಕ ದೃಷ್ಟಿಯಿಂದ – **ನೇಹ ನಾನಾಸ್ತಿ ಕಿಂಚನ** – ಚೈತನ್ಯವನ್ನು ಬಿಟ್ಟು ಬೇರೆ ಯಾವ ಎರಡನೆಯ ವಸ್ತುವೂ ಇಲ್ಲ.

### ಉಪಸಂಹಾರ

ಹೀಗೆ ಜಗತ್ತಿನ ವಿಷಯದಲ್ಲಿ ಅನೇಕ ಪಾಶ್ಚಾತ್ಯ ಮತ್ತು ವೈದಿಕ ಸಿದ್ಧಾಂತಗಳು ಮೈತಳೆದಿವೆ. ಕೆಲ ಸಿದ್ಧಾಂತಗಳು ಜಗತ್ತಿನ ಸೃಷ್ಟಿ ಮತ್ತು ನಿರ್ವಹಣೆಗಳಲ್ಲಿ ದೇವರ ಪಾತ್ರವನ್ನು ನಿರಾಕರಿಸಿದ್ದರೆ, ಕೆಲವು ವಿಭಿನ್ನ ಪ್ರಕಾರಗಳಲ್ಲಿ ದೇವರ ಪಾತ್ರವನ್ನು ಒಪ್ಪಿಕೊಂಡಿವೆ. ಆದರೆ ಜಗತ್ತಿನ ರಹಸ್ಯ ಇನ್ನೂ ಸಮಾಧಾನಕರವಾಗಿ ಅನಾವರಣಗೊಂಡಿಲ್ಲವೆಂದೇ ಹೇಳಬೇಕು (ಎಂದಾದರೂ ಆದೀತೆ?!).

ಜಡವಸ್ತುಗಳ ಸುಸಜ್ಜಿತ ರಚನೆ ಹೇಗೆ ತಾನೆ ಸಾಧ್ಯವಾಯಿತು? ಕೆಲವು ಪದಾರ್ಥಗಳು ಯಾವ ನಿಯಮಕ್ಕೂ ಬದ್ಧವಾಗದೆ ವರ್ತಿಸುವುದು ಹೇಗೆ? – ಈ ಪ್ರಶ್ನೆಗಳಿಗೆ ವಿಜ್ಞಾನ ಇನ್ನೂ ಸಮರ್ಪಕ ಉತ್ತರ ಕೊಟ್ಟಿಲ್ಲ. ಅದಲ್ಲದೆ, ಚೈತನ್ಯವು ಜಗತ್ತಿನ ರೂಪದಲ್ಲಿ ಹೇಗೆ ತಾನೇ ಕಾಣಿಸಿಕೊಂಡಿತು? ದೇವರನ್ನು ಕೇವಲ ಚೈತನ್ಯವೆಂದು ಪರಿಗಣಿಸಬೇಕೆಂದಾದರೆ, ಸಗುಣ ಸಾಕಾರ ದೇವರ ಕಲ್ಪನೆ ಸುಳ್ಳೇ? ಜಗತ್ತು ಮತ್ತು ದೇವರುಗಳ ಸಂಬಂಧದಲ್ಲಿ ವ್ಯಕ್ತಿಯ ನೈಜ ಸ್ವರೂಪ ಮತ್ತು ಪಾತ್ರವೇನು? ತಾತ್ತ್ವಿಕವಾಗಿ ಒಬ್ಬ ವ್ಯಕ್ತಿ ತನ್ನನ್ನು ಜಡವೆಂದು ಪರಿಗಣಿಸಬೇಕೋ ಇಲ್ಲಾ ಚೈತನ್ಯವೆಂದು ಪರಿಗಣಿಸಬೇಕೋ ಅಥವಾ ಜಡಚೈತನ್ಯಗಳ ಮಿಶ್ರಣವೆಂದೋ – ಈ ಎಲ್ಲ ಪ್ರಶ್ನೆಗಳು ಆಧ್ಯಾತ್ಮಿಕ ಕ್ಷೇತ್ರದಲ್ಲಿಯೂ ಉಳಿಯುತ್ತವೆ. ಜೀವಿಯೊಬ್ಬನ ಮತ್ತು ಸಾಕಾರ ಈಶ್ವರನ ತಾತ್ತ್ವಿಕ ಭೂಮಿಕೆಗಳನ್ನು ಅಧ್ಯಯನ ಮಾಡಿದಾಗ ಮಾತ್ರ ಮೇಲಿನ ಪ್ರಶ್ನೆಗಳಿಗೆ ಉತ್ತರ ದೊರಕುತ್ತದೆ. ಆ ಪ್ರಯತ್ನವನ್ನು ಮುಂದಿನ ಸಂಚಿಕೆಗಳಲ್ಲಿ ಮಾಡಲಾಗುವುದು. **(ಮುಂದಿನ ತಿಂಗಳು: ಜೀವಿಯ ರಹಸ್ಯ)**

---

## ಭಗವಂತನನ್ನು ಅರಸುತ್ತ

### ಆಧ್ಯಾತ್ಮಿಕ ಜೀವನದ ನಾಲ್ಕು ಹಂತಗಳು

ಸ್ವಾಮಿ ಯತೀಶ್ವರಾನಂದ

(ಹಿಂದಿನ ಸಂಚಿಕೆಯಲ್ಲಿ: ಆಧ್ಯಾತ್ಮಿಕ ಜೀವನದಲ್ಲಿ ಮೊದಲ ಹಂತವೆಂದರೆ, ಆಚಾರಸಹಿತ ಪೂಜಾವಿಧಿ. ಎರಡನೆಯ ಹಂತವೆಂದರೆ, ಪ್ರಾರ್ಥನೆ ಮತ್ತು ಜಪಗಳ ಮೂಲಕ ಭಗವಂತನನ್ನು ಆರಾಧಿಸುವುದು.)

ಆಧ್ಯಾತ್ಮಿಕ ಜೀವನದ ಮೂರನೆಯ ಹಂತವೆಂದರೆ **ಧ್ಯಾನ**. ಇದರಲ್ಲಿ ದೇವತಾಮೂರ್ತಿಯ ಚಿತ್ರವಾಗಲೀ ಅಥವಾ ಶಬ್ದಸಂಕೇತವಾಗಲೀ ನಮಗೆ ಬೇಕಾಗಿಬರುವುದಿಲ್ಲ. ಈ ಸ್ಥಿತಿಯಲ್ಲಿ ಭಗವಂತನೆಡೆಗೆ ಸರ್ವದಾ ನಮ್ಮೆಲ್ಲ ಆಲೋಚನೆಗಳೂ ಹರಿಯುತ್ತಿರುತ್ತವೆ. ಆಗ ನಮ್ಮ ಮನಸ್ಸಿನಲ್ಲಿ ದಿವ್ಯತೆಯ ಜೀವಂತ ಸಾನ್ನಿಧ್ಯವನ್ನು ನಾವು ಯಾವಾಗಲೂ ಅನುಭವಿಸುತ್ತಿರುತ್ತೇವೆ. ಶಬ್ದಸಂಕೇತವಾದ ಓಂಕಾರವೂ ಕೂಡ ಮರೆಯಾಗುವುದು; ಭಗವತ್ಸಾನ್ನಿಧ್ಯ ಮಾತ್ರವೇ ಉಳಿಯುವುದು.

ಆಧ್ಯಾತ್ಮಿಕ ಜೀವನದ ಉನ್ನತಸ್ಥಿತಿಯು **ಆತ್ಮ–ಪರಮಾತ್ಮರ ನಡುವೆ ಐಕ್ಯಭಾವವನ್ನು** ಅನುಭವಿಸಿದಾಗ ನಮಗೆ ಲಭ್ಯವಾಗುವುದು. ಆ ಅನುಭವದಲ್ಲಿ ಪ್ರತ್ಯೇಕತೆಯ ಭಾವವಿರುವುದಿಲ್ಲ. ಇದು ಅನಂತತತ್ತ್ವದ ಸಾಕ್ಷಾತ್ಕಾರದ ಹಂತವಾಗಿದೆ. ಸಾಧಕನು ತನ್ನ ಆಧ್ಯಾತ್ಮಿಕ ಜೀವನದ ಸಮಯದಲ್ಲಿ ಹಾದು ಹೋಗಬೇಕಾದ ನಾಲ್ಕು ಹಂತಗಳಿವು.

ಮೊದಲು ನಾವು ಸಾಧನೆಯ ಯಾವ ಹಂತದಲ್ಲಿದ್ದೇವೆ ಎಂದು ತಿಳಿದುಕೊಳ್ಳಬೇಕು. ನಂತರವಷ್ಟೇ ಮುಂದಿನ ಹಂತಕ್ಕೆ ಹೋಗಲು ಪ್ರಯತ್ನಪಡಬೇಕು. ಮೊದಲ ಹಂತಕ್ಕೆ ಮಾತ್ರ ನಮ್ಮ ಅರ್ಹತೆ ಇದ್ದರೆ, ನಾವು ಅವಸರಪಟ್ಟು ಕಡೆಯ ಹಂತಕ್ಕೆ ನೇರವಾಗಿ ಜಿಗಿಯಬಾರದು. ಇದರಿಂದ ದುಷ್ಫಲಗಳು ಉಂಟಾಗುತ್ತವೆ. ನಾವು ಮನೆಯೊಂದರ ಛಾವಣಿಯನ್ನು ತಲುಪಬೇಕಾದರೆ, ಅದರ ಮೆಟ್ಟಿಲುಗಳನ್ನು ಒಂದೊಂದಾಗಿ ಏರಬೇಕಾಗುತ್ತದೆ. ಒಂದೇ ಏಟಿಗೆ ಛಾವಣಿಯ ಮೇಲೆ ಜಿಗಿಯಲು ಹೋದರೆ, ಕಾಲು ಮುರಿದುಕೊಳ್ಳಬೇಕಾಗುತ್ತದೆ!

ಆರಂಭದ ಹಂತದಲ್ಲಿರುವ ಸಾಧಕನಿಗೆ ಭಗವಂತನ ವಿಗ್ರಹವನ್ನು ಪುಷ್ಪ, ಸುಗಂಧ ದ್ರವ್ಯ ಮತ್ತು ಗಂಧಗಳಿಂದ ಪೂಜಿಸುವುದು ಹೆಚ್ಚಿನ ಆನಂದವನ್ನು ತರುವುದು. ಅದಲ್ಲದೆ, ಜಪಸಾಧನೆಗಾಗಿ ಅಭಿರುಚಿಯನ್ನೂ ಮನಸ್ಸಿನಲ್ಲಿ ಮೂಡಿಸುವುದು. ಜಪವು ನಿಧಾನವಾಗಿ ಧ್ಯಾನದತ್ತ ಕೊಂಡೊಯ್ಯುವುದು. ನಂತರ ಭಗವಂತನೇ ಮುಂದಿನ ದಾರಿಯನ್ನು ತೋರಿಸುವನು.

ಸಮಾಧಿ ಎರಡು ಬಗೆ: **ನಿರ್ವಿಕಲ್ಪ** ಮತ್ತು **ಸವಿಕಲ್ಪ**. ಶ್ರೀರಾಮಕೃಷ್ಣರು ತಮ್ಮ ಮೊದಲ ದರ್ಶನದಲ್ಲಿ ಜಗನ್ಮಾತೆಯನ್ನು ಕಂಡರು. ಬಹಳ ಹೊತ್ತಿನವರೆಗೆ ಬಾಹ್ಯಪ್ರಜ್ಞೆಯಿಲ್ಲದೆ ಇದ್ದರು. ಇದು **ಸವಿಕಲ್ಪ ಸಮಾಧಿ**. ಅಂದರೆ, ಸಗುಣ ಅಥವಾ ಸ್ವರೂಪವುಳ್ಳ ಭಗವಂತನ ರೂಪದ ದರ್ಶನ; ಇಷ್ಟದೇವತೆಯನ್ನು ಮುಖಾಮುಖಿಯಾಗಿ ನೋಡುವುದು. ಈ ಸ್ಥಿತಿಯಲ್ಲಿ ಅಹಂಕಾರದ ಲವಲೇಶ ಉಳಿದಿರುತ್ತದೆ. ನಿರ್ವಿಕಲ್ಪ ಸಮಾಧಿಯಲ್ಲಿ ಸಾಧಕನು ತನ್ನ ವ್ಯಕ್ತಿತ್ವದ ಅರಿವನ್ನು ಕಳೆದುಕೊಳ್ಳುತ್ತಾನೆ. ದೇವತಾಮೂರ್ತಿಯ ನಾಮ ಮತ್ತು ರೂಪಗಳ ಆಚೆಗೆ ಹೋಗುತ್ತಾನೆ. ಅವನ ಪ್ರಜ್ಞೆಯು ಭಗವತ್‌ಪ್ರಜ್ಞೆಯೊಡನೆ ಸಂಪೂರ್ಣವಾಗಿ ವಿಲೀನವಾಗುತ್ತದೆ.

ಆಧ್ಯಾತ್ಮಿಕ ಜೀವನದ ಆರಂಭದಲ್ಲಿ, ಅಹಂಕಾರದ ದೆಸೆಯಿಂದ ವ್ಯಕ್ತಿಗತ ದೇಹಭಾವನೆಯು ಸಂಪೂರ್ಣ ನಾಶವಾಗಿ, ಇಡೀ ಪ್ರಪಂಚವು ಭಗವಂತನ ಬೆಳಕಿನಿಂದ ತುಂಬಿರುವುದನ್ನು ಕಾಣಲಾಗುವುದಿಲ್ಲ. ನಮ್ಮ ದೇಹವು ಜಡಜಗತ್ತಿಗೆ ಸೇರಿದ್ದು. ಅದಿರುವುದು ಜಗತ್ತಿನ **ಸ್ಥೂಲ ಅಭಿವ್ಯಕ್ತಿಯ ಹಂತದಲ್ಲಿ**. ನಮ್ಮ ಮನಸ್ಸು ಮತ್ತು ಬುದ್ಧಿಗಳು ಹಾಗೂ ಅವುಗಳಿಂದ ಹೊರಬರುವ ಆಲೋಚನೆಗಳು ಮತ್ತು ಭಾವನೆಗಳು **ಸೂಕ್ಷ್ಮ ಹಂತದಲ್ಲಿ** ಇರುತ್ತವೆ. ದೇಹಪ್ರಜ್ಞೆಯಾಗಲೀ, ಆಲೋಚನೆ ಮತ್ತು ಭಾವನೆಗಳಾಗಲೀ **ನಿರ್ವಿಕಲ್ಪ ಸಮಾಧಿಯ** ಸ್ಥಿತಿಯಲ್ಲಿ ಇರುವುದಿಲ್ಲ. ಈ ಸ್ಥಿತಿಯು ಭಗವಂತನೊಡನೆ ಪರಿಪೂರ್ಣ ಐಕ್ಯತೆಯ ಸ್ಥಿತಿಯಾಗಿದೆ. ಆ ಮೂಲಕ ಅರಿವು ಅಥವಾ ಪ್ರಜ್ಞೆಯು ಏರಬಲ್ಲ ಅತ್ಯಂತ ಉನ್ನತ ಸ್ಥಿತಿಯಾಗಿದೆ.

**(ಮುಂದಿನ ತಿಂಗಳು: ದಿವ್ಯತೆಯು ಅಭಿವ್ಯಕ್ತವಾಗುವ ವಿವಿಧ ನೆಲೆಗಳು)**